ಲಂಚ ಪ್ರಕರಣ: ಜಿಪಂ ಮಾಜಿ ಅಧ್ಯಕ್ಷ ಜೈಲುಪಾಲು

ಕೋಲಾರ: ಜಿಪಂ ಮಾಜಿ ಅಧ್ಯಕ್ಷ ಕೌನ್ಸಿಲರ್ ಶ್ರೀನಿವಾಸ್‌ಗೆ ಭ್ರಷ್ಟಾಚಾರ ತಡೆ ನಿಗ್ರಹ ಕಾಯಿದೆಯಲ್ಲಿ ಬೆಂಗಳೂರಿನ 23ನೇ ಲೋಕಾಯುಕ್ತ ನ್ಯಾಯಾಲಯ ಒಂದೂವರೆ ವರ್ಷ ಜೈಲುಶಿಕ್ಷೆ ಮತ್ತು 25 ಸಾವಿರ ರು. ದಂಡ ವಿಧಿಸಿದೆ. 2010ರಲ್ಲಿ ಜಿಪಂ ಅಧ್ಯಕ್ಷರಾಗಿದ್ದಾಗ ಅಂದಿನ ಡಿವೈಎಸ್‌ಪಿ ಡಾ.ರಮೇಶ್‌ಬಾಬು ಅವರಿಗೆ 3 ಲಕ್ಷ ರು. ಲಂಚ ಕೊಡುವಾಗ ಲೋಕಾಯುಕ್ತ ಬಲೆಗೆ ಸಿಲುಕಿದ್ದರು. ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಪ್ರಕರಣ ಆರೋಪಿ ಮನವಿಯ ಮೇರೆಗೆ ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿತ್ತು. ವಿಚಾರಣೆ ನಡೆಸಿದ ಲೋಕಾಯುಕ್ತ ನ್ಯಾ. ಗೋಪಾಲ ಅವರು ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.

ಕರ್ನಾಟಕ, ಆಂಧ್ರ, ತಮಿಳುನಾಡು ಅಧಿಕಾರಿಗಳ ಸಮನ್ವಯ । ವ್ಯಾಟ್ಸಪ್ ಹಣ, ಮದ್ಯ, ಉಡುಗೊರೆ ಸಾಗಣೆ ತಡೆಗೆ ಸೂಚನೆ

ಚೆಕ್‌ಪೋಸ್ಟ್ ಕಣ್ಗಾವಲಿಗೆ ಜಂಟಿ ಕಾರ್ಯಪಡೆ

ವಿಶ್ವವಾಣಿ ಸುದ್ದಿಮನೆ ಕೋಲಾರ

ವಿಧಾನಸಭೆ ಚುನಾವಣೆ ಹಿನ್ನೆಲೆ ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳಲ್ಲಿ ಪೊಲೀಸ್ ಮತ್ತು ಅಬಕಾರಿ ಇಲಾಖೆ ಜಂಟಿ ಕಾರ್ಯಪಡೆ ನೇತೃತ್ವದಲ್ಲಿ ತಾತ್ಕಾಲಿಕ ಚೆಕ್‌ಪೋಸ್ಟ್ ಸ್ಥಾಪನೆ ಮಾಡುವ ಮೂಲಕ ದುಷ್ಟಶಕ್ತಿಗಳ ವಿರುದ್ಧ ನಿಗಾ ವಹಿಸಬೇಕೆಂದು ಜಿಲ್ಲಾಧಿಕಾರಿ ಜಿ. ಸತ್ಯವತಿ ಹೇಳಿದರು.

ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆ ಆಂಧ್ರ ಮತ್ತು ತಮಿಳುನಾಡು ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿ ಮಾತನಾಡಿ, ಚುನಾವಣೆ ಸಮಯದಲ್ಲಿ ಅಕ್ರಮ ಹಣ, ಮದ್ಯ ಹಾಗೂ ಉಡುಗೊರೆಗಳು ವಿತರಣೆ ಆಗದಂತೆ ಕಟ್ಟೆಚ್ಚರ ಕೈಗೊಳ್ಳಬೇಕೆಂದರು.

ಚುನಾವಣೆಗೆ ಮೊದಲೇ ದಾಸ್ತಾನು ಮಾಡಿಕೊಳ್ಳುವ ಅಪಾಯ ಇರುವುದರಿಂದಾಗಿ ಈಗಿನಿಂದಲೇ ಚೆಕ್‌ಪೋಸ್ಟ್ ಹಾಕುವ ಮೂಲಕ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಕರ್ನಾಟಕಕ್ಕೆ ಆಂಧ್ರ ಮತ್ತು ತಮಿಳುನಾಡು ಗಡಿ ಆಗಿರುವುದರಿಂದಾಗಿ ನೆರೆ ರಾಜ್ಯಗಳ ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕಾಗಿದ್ದು, ತಪ್ಪಿದಲ್ಲಿ ಚುನಾವಣೆ ಸಂದರ್ಭದಲ್ಲಿ ಅಕ್ರಮಗಳು ಅವ್ಯಾಹಿತವಾಗಿ ನಡೆಯುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ವಿಧಾನಸಭೆ ಚುನಾವಣೆ ಹಿನ್ನೆಲೆ ಆಂಧ್ರ ಮತ್ತು ತಮಿಳುನಾಡು ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳ ಜತೆ ಜಿಲ್ಲಾಧಿಕಾರಿ ಜಿ.ಸತ್ಯವತಿ ಸಭೆ ನಡೆಸಿದರು.

ವ್ಯಾಟ್ಸಪ್ ಗ್ರೂಪ್: ಕರ್ನಾಟಕ, ಆಂಧ್ರ, ತಮಿಳುನಾಡು ಪೊಲೀಸ್ ಹಾಗು ಅಬಕಾರಿ ಇಲಾಖೆ ಅಧಿಕಾರಿ ಒಳಗೊಂಡಂತೆ ವ್ಯಾಟ್ಸಪ್ ಗ್ರೂಪ್ ರಚನೆ ಮಾಡುವ ಮೂಲಕ ಚುನಾವಣಾ ಸಂದರ್ಭದಲ್ಲಿ ಮೂರೂ ರಾಜ್ಯಗಳ ಕಾನೂನು,ಸುವ್ಯವಸ್ಥೆ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳುವುದರೊಂದಿಗೆ ಸಮನ್ವಯತೆ ಸಾಧಿಸಬೇಕೆಂದು ಸಲಹೆ ನೀಡಿದರು. ಪ್ರತಿದಿನ ಪರಿಸ್ಥಿತಿ ಕುರಿತಂತೆ ಪರಸ್ಪರ ಚರ್ಚೆ ಮಾಡುವ ಮೂಲಕ ಮಾಹಿತಿ ವಿನಿಮಯ ಮಾಡಿಕೊಳ್ಳುವುದು ಮುಖ್ಯ ಎಂದು ತಿಳಿಸಿದರು.

ವಲಸಿಗರ ಮೇಲೆ ನಿಗಾ: ಮಾಲೂರು ತಾಲೂಕಿನ ಆನಿಮಿಟ್ಟನಹಳ್ಳಿಯಲ್ಲಿ 168 ಮತದಾರರಿದ್ದು ಇವರೆಲ್ಲರೂ ಧರ್ಮಾವರಂ ಮೂಲದವರೆಂದು ಆರೋಪವಿದೆ. ತಹಸೀಲ್ದಾರ್ ಜತೆಗೆ ನಾನೇ ಕುದ್ದಾಗಿ ಸ್ಥಳ ಪರಿಶೀಲನೆ ನಡೆಸಿದಾಗ ಕೇವಲ 35 ರಿಂದ 40 ಮಂದಿ ಸಿಕ್ಕಿದ್ದು ಉಳಿದವರಿಗೆ ನೋಟಿಸ್ ಕೊಟ್ಟು ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆದುಹಾಕಲು ಸೂಚಿಸಲಾಗಿದೆ. ಗಡಿ ಪ್ರದೇಶಗಳಲ್ಲಿ ಇಂತಹುದೇ ಪ್ರಕರಣಗಳು ಇರುವ ಸಂಭವವಿದ್ದು ಈ ಬಗ್ಗೆ ಜಂಟಿಕಾರ್ಯಪಡೆ ನಿಗಾ ಇರಿಸಬೇಕು. ಮುಖ್ಯವಾಗಿ ರೌಡಿಶೀಟರ್ ಮತ್ತು ಗೂಂಡಾಗಳ ಮೇಲೆ ಕಣ್ಗಾವಲು ಇರಿಸಬೇಕಾಗಿದ್ದು ಯಾವುದೇ ಕಾರಣಕ್ಕೂ ದುಷ್ಟಶಕ್ತಿಗಳು ಚುನಾವಣೆ ಸಮಯದಲ್ಲಿ ಕರ್ನಾಟಕ ಪ್ರವೇಶಿಸದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಮನವಿ ಮಾಡಿದರು.

> ಚುನಾವಣೆ ನಿಮಿತ್ತ ಅಂತಾರಾಜ್ಯ ಅಧಿಕಾರಿಗಳ ಸಭೆ ನಡೆಸಲಾಗಿದ್ದು, ಚುನಾವಣಾ ಅಕ್ರಮಗಳು ನಡೆಯದಂತೆ ಕಟ್ಟೆಚ್ಚರ ವಹಿಸಲು ಸೂಚಿಸಲಾಗಿದೆ. ನಮ್ಮಷ್ಟೇ ಎಚ್ಚರಿಕೆಯಿಂದ ಅವರೂ ಸಹಾಕೆಲಸ ಮಾಡುವುದು ಅಗತ್ಯವಾಗಿದ್ದು ಈ ದೆಸೆಯಲ್ಲಿ ತಿಂಗಳಿಗೊಮ್ಮೆ ಸಭೆ ನಡೆಸುವ ಮೂಲಕ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡು ಚುನಾವಣೆ ಯಶಸ್ವಿಯಾಗಿ ನಡೆಸಲು ಕ್ರಮ ಕೈಗೊಳ್ಳಲಾಗುತ್ತದೆ.
> – ಜಿ.ಸತ್ಯವತಿ, ಜಿಲ್ಲಾಧಿಕಾರಿ

ಮಾಲೂರಿನ ಸಂಪಂಗೆರೆ ಬಾರ್ಡರ್, ಶ್ರೀನಿವಾಸಪುರದ ಗೌನಿಪಲ್ಲಿ, ಮುಳಬಾಗಿಲಿನ ಹೆಬ್ಬಣಿ, ಬಂಗಾರಪೇಟೆಯ ರಾಜುಪೇಟ್, ಕೋಲಾರದ ರಾಮಸಂದ್ರ, ಕ್ಯಾಲನೂರು ಮುಂತಾದ ಕಡೆ ತಾತ್ಕಾಲಿಕ ಚೆಕ್‌ಪೋಸ್ಟ್ ನಿರ್ಮಾಣ ಮಾಡುವ ಸಂಪ್ರದಾಯವಿದ್ದು ಈ ಬಾರಿ ಮತ್ತಷ್ಟು ಹೆಚ್ಚಿಸುವ ಅಗತ್ಯವಿದೆ ಎಂದು ಅಬಕಾರಿ ಇಲಾಖೆ ಉಪ ಆಯುಕ್ತ ಕೆ.ಕೆ.ಸುಮಿತಾ ಸಭೆಗೆ ಮಾಹಿತಿ ನೀಡಿದರು. ಎಸ್ಪಿ ಡಾ.ರೋಹಿಣಿ,ಕೆಜಿಎಫ್ ಎಸ್ಪಿ ಲೋಕೇಶ್ ಕುಮಾರ್, ಎಎಸ್ಪಿ ರಾಜೀವ್, ಡಿವೈಎಸ್ಪಿ ಅಬ್ದುಲ್ ಸತ್ತಾರ್, ತಮಿಳುನಾಡಿನ ಹೊಸೂರು ಡಿವೈಎಸ್ಪಿ ವಿಜಯ ಕಾರ್ತಿಕ್ ರಾಜ್, ಬಾಗಲೂರು ಸರ್ಕಲ್ ಇನ್ಸ್‌ಪೆಕ್ಟರ್ ಸೆಂದಿಲ್ ಕುಮಾರ್, ಅಬಕಾರಿ ಡಿವೈಎಸ್ಪಿ ಆರ್ಮುಗಂ, ಆಂಧ್ರದ ಪಲಮನೇರು ಡಿವೈಎಸ್ಪಿ ಚೌಡೇಶ್ವರಿ,ಕುಪ್ಪಂ ಸರ್ಕಲ್ ಇನ್ಸ್‌ಪೆಕ್ಟರ್ ರಾಘವನ್, ಚೌಡೇಪಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ರವೀಂದ್ರ, ಗಂಗಾವರಂ ಇನ್ಸ್‌ಪೆಕ್ಟರ್ ಮಧುಸೂದನ್ ಇದ್ದರು.

ಅವ್ಯವಹಾರ ನಡೆಸುತ್ತಿಲ್ಲ: ಶಾಸಕ ಸ್ಪಷ್ಟನೆ

ವಿಶ್ವವಾಣಿ ಸುದ್ದಿಮನೆ ತುಮಕೂರು

ನಾನು ಯಾವುದೇ ಅಕ್ರಮ, ಅವ್ಯವಹಾರ ಚಟುವಟಿಕೆಗಳನ್ನು ನಡೆಸುತ್ತಿಲ್ಲ, ನನ್ನ ಬಳಿ ಹಣವಿಲ್ಲ. ನಾನಿನ್ನೆಲ್ಲಿ ಭೂಗತ ಪಾತಕಿ ರವಿ ಪೂಜಾರಿಗೆ 10 ಕೋಟಿ ಹಣ ನೀಡಲಿ ಎಂದು ಶಾಸಕ ಸುರೇಶ್‌ಬಾಬು ತಿಳಿಸಿದರು.

ನಗರದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಣ ನೀಡುವಂತೆ ಬೆದರಿಕೆ ಕರೆ ಬಂದಿತ್ತು, ನಾನು ಜನಸೇವಕ ನನ್ನ ಬಳಿ ಹಣವಿಲ್ಲ, ಹಣವಿದ್ದಿದ್ದರೆ ರವಿ ಪೂಜಾರಿ ಬಳಿ ಹೋಗಿ ನೀಡುತ್ತಿದೆ. ಆದರೆ ನನ್ನ ಬಳಿ ಹಣ ಇಲ್ಲ. ಹಾಗಾಗಿ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಶೀಘ್ರದಲ್ಲಿಯೇ ಸತ್ಯಾಸತ್ಯತೆ ಬಹಿರಂಗಗೊಳ್ಳಲಿದೆ ಎಂದು ತಿಳಿಸಿದರು.

ಚಿ.ನಾ.ಹಳ್ಳಿ ತಾಲೂಕಿನಲ್ಲಿ ಜನಾಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಅತಿ ಹೆಚ್ಚು ಮತಗಳಿಂದ ಈ ಬಾರಿಯೂ ಗೆಲ್ಲುತ್ತೇನೆ. ನನಗೆ ಕ್ಷೇತ್ರದ ಜನ ಬೆಂಬಲಿಸುತ್ತಾರೆ ಎಂಬ ವಿಶ್ವಾಸವಿದೆ. ನಾನು ಸಾಕಷ್ಟು ಬಾರಿ ಗಾರ್ಮೆಂಟ್ಸ್ ತೆರೆದು ತಾಲೂಕಿನ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ಆಸೆ ಹೊಂದಿದ್ದು, ಸಾಕಷ್ಟು ಬಾರಿ ಪ್ರಯತ್ನಪಟ್ಟಿದ್ದೇನೆ. ಆದರೆ ಕೆಲವು ಉದ್ಯಮಿಗಳು ಗಾರ್ಮೆಂಟ್ಸ್ ತೆಗೆಯಲು ಪ್ರೋತ್ಸಾಹ ನೀಡದ ಹಿನ್ನೆಲೆಯಲ್ಲಿ ಹಿನ್ನಡೆಯಾಗಿತ್ತು. ಶೀಘ್ರದಲ್ಲಿಯೇ ತಾಲೂಕಿನಲ್ಲಿ ಗಾರ್ಮೆಂಟ್ಸ್ ತೆರೆಯ ಲಾಗುವುದು ಎಂದರು. ಎರಡು ಬಾರಿ ಚುನಾವಣೆಯಲ್ಲಿ ಸೋತಿದ್ದೇನೆ. ಮೂರು ಬಾರಿ ಶಾಸಕನಾಗಿದ್ದೇನೆ. ನನ್ನ ಕ್ಷೇತ್ರದ ಜನರಿಗೆ ಪ್ರಾಮಾಣಿಕವಾಗಿ ಸೇವೆ ಮಾಡು ತ್ತಿದ್ದೇನೆ. ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದೇನೆ ಎಂದರು.

ಉಚಿತ ಚಿಕಿತ್ಸಾ ಶಿಬಿರ

ನಗರದಲ್ಲಿ ಟಿಕೆಟ್ ಆಕಾಂಕ್ಷಿಗಳು ಹೆಚ್ಚಿದ್ದಾರೆ. ಗೋವಿಂದರಾಜು ಮತ್ತು ನರಸೇಗೌಡರೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸುತ್ತೇವೆ. ಫೆ. 14ರಂದು ಚಿಕ್ಕನಾಯಕನಹಳ್ಳಿಯ ಹೈಸ್ಕೂಲ್ ಮೈದಾನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾಮೂಹಿಕ ಮಡಿಲು ತುಂಬುವ ಕಾರ್ಯಕ್ರಮ , ಪ್ರಸೂತಿ ತಜ್ಞರದಿಂದ ತಪಾಸಣೆ, ಉಚಿತ ಚಿಕಿತ್ಸಾ ಶಿಬಿರ, 1008 ದಂಪತಿಗಳಿಂದ ಸತ್ಯನಾರಾಯಣ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಧನಂಜಯ ಸ್ವಾಮೀಜಿಗೆ ಗೌರವ ಡಾಕ್ಟರೇಟ್

ಶ್ರೀ ಸತ್ಯಶನೇಶ್ವರಸ್ವಾಮಿ ಪುಣ್ಯ ಕ್ಷೇತ್ರದ ಧರ್ಮದರ್ಶಿ ಶ್ರೀ ಧನಂಜಯ್ಯಸ್ವಾಮಿಜೀ ಅವರಿಗೆ ಅಮೇರಿಕಾದ ಜೆರುಸಲೇಂ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿ ಗೌರವಿಸಿದೆ.

ವಿಶ್ವವಾಣಿ ಸುದಿಮನೆ ಕುಣಿಗಲ್

ಪಟ್ಟಣದ ಪ್ರಸಿದ್ಧ ಬಿದನಗೆರೆ ಶ್ರೀ ಸತ್ಯಶನೇಶ್ವರ ಸ್ವಾಮೀ ಪುಣ್ಯ ಕ್ಷೇತ್ರದ ಧರ್ಮದರ್ಶಿ ಧನಂಜಯ್ಯಸ್ವಾಮೀಜಿ ಅವರಿಗೆ ಅಮೇರಿಕಾದ ಜೆರುಸಲೇಂ ವಿಶ್ವವಿದ್ಯಾಲ ಯವು ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿದೆ.

ಸರಳ ಸಮೋಹಿಕ ವಿವಾಹ, ಅಸಹಾಯಕ ವೃದ್ಧರಿಗೆ, ಅಂಗವಿಕಲರಿಗೆ ಮಾಸಾಶನ, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಧನ, ಆರೋಗ್ಯ ತಪಾಸಣೆ, ದಾಸೋಹ ಸೇರಿ ಹಲವು ಕ್ಷೇತ್ರದಲ್ಲಿ ಸಲ್ಲಿಸಿರುವ ಸಮಾಜ ಹಾಗೂ ಸಮುದಾಯದ ಸೇವೆಯನ್ನು ಪರಿಗಣಿಸಿ ಚನ್ನೈ ವೇಲೂರಿನಲ್ಲಿ ನಡೆದ ಕಾರ್ಯಕ್ರಮ ಒಂದರಲ್ಲಿ ಅಮೇರಿಕಾದ ಜೆರುಸಲೇಂ ವಿವಿಯ ಮುಖ್ಯಸ್ಥ ಮಾಜಿ ಐಪಿಎಸ್ ಅಧಿಕಾರಿ ಹೆಚ್.ಡಿ ಸಾಂಗ್ಲಿಯಾನ, ಹಾಲ್ ರಾಬೋಟ್ ಅವರು ಧನಂಜಯ್ಯಸ್ವಾಮೀಜಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಸನ್ಮಾನಿಸಲಾಗಿದೆ. ಈ ಸಂಬಂಧ ಪ್ರತಿಕ್ರಯಿಸಿದ ಡಾ. ಧನಂಜಯ್ಯಸ್ವಾಮೀಜಿ ಡಾಕ್ಟರೇಟ್ ಪದವಿ ನನಗೆ ಮತ್ತಷ್ಟು ಸಮಾಜ, ಸಮುದಾಯ ಮತ್ತು ಧಾರ್ಮಿಕ ಸೇವೆ ಮಾಡುವ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂದಿದ್ದಾರೆ.

ಜಾತ್ರೆಗೆ ಸಜ್ಜಾದ ಬಿದನಗೆರೆ ಶ್ರೀ ಕ್ಷೇತ್ರ : ತುಮಕೂರು ಜಿಲ್ಲೆಯ ಧಾರ್ಮಿಕ ಇತಿಹಾಸದಲ್ಲೇ ಪ್ರಥಮ ದೇವಸ್ಥಾನ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವ ಪಟ್ಟಣದ ಹೊರ ವಲಯ ಬಿದನಗೆರೆ ಶ್ರೀ ಸತ್ಯ ಶನೇಶ್ವರಸ್ವಾಮಿ, ಉದ್ಭವ ಬಸವಣ್ಣ, ಶ್ರೀ ಪಂಚಮುಖಿ ಆಂಜನೇಯಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಫೆ.13 ರಂದು 9 ನೇ ವರ್ಷದ ಅದ್ದೂರಿ ಜಾತ್ರಾ ಮಹೋತ್ಸವ ನಡೆಯಲಿದು ಈ ನಿಟ್ಟಿನಲ್ಲಿ ಈಗಗಲೇ ಪೂರ್ವಭಾವಿ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ ಸ್ವಾಮೀಜಿ ರಾಜ್ಯದ ಪ್ರಮುಖ ಗಣ್ಯರು, ರಾಜಕಾರಣಿಗಳು, ಸಾಹಿತಿಗಳು ನಾನಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಈ ದೇವಾಲಯಕ್ಕೆ ಭೇಟಿ ನೀಡಿ ದೇವರ ಆಶೀರ್ವಚನ ಪಡೆದಿದ್ದಾರೆ. ಭಕ್ತಾಧಿಗಳ ನೆರವಿನಿಂದ ಶ್ರೀ ಸತ್ಯ ಶನೇಶ್ವರಸ್ವಾಮಿ ದೇವಾಲಯ, ನಿರ್ಮಾಣವಾಗಿ ಪೂಜೆ ಪುನ ಸ್ಕಾರಗಳು 22 ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಅಲ್ಲದೆ ವಿಶ್ವದಲ್ಲೇ ಪ್ರಥಮ ಎನ್ನಬ ಹುದಾದ ಸುಮಾರು 151 ಅಡಿ ಎತ್ತರದ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ವಿಗ್ರಹ ಕಾಮಗಾರಿ ಬರದಿಂದ ಸಾಗುತ್ತಿದ್ದು ಈಗಾ ಗಲೇ 85 ಅಡಿವರೆಗೂ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಿದರು.

ಕಾರ್ಯಕ್ರಮಗಳು

ಫೆ. 13 ಬೆಳಗ್ಗೆ 6 ರಿಂದ ಹೋಮ ಹವನ, ಮಂಗಳವಾದ್ಯ, ಅಭಿಷೇಕ, ಅಷ್ಟೋತ್ತರ ಅಭಿಷೇಕ, ಪುಷ್ಪಾರ್ಚನೆ, ಮಹಾಮಂಗಳಾರತಿ, ಸಂಜೆ ಮದ್ದಿನ ಮರ ಸಿಡಿತ ಪ್ರದರ್ಶನ ಹಾಗೂ ಸಂಜೆ 6 ಗಂಟೆಗೆ ಡ್ರಾಮಾ ಜೂನಿಯರ್ಸ್, ಕಾಮಿಡಿ ಕಿಲಾಡಿಗಳು, ಸರಿಗಮಪ ಲಿಟಪ್ ಚಾಂಪ್ಸ್ ಹಾಗೂ ಭಕ್ತಿ ಭಾವ, ನಗೆ, ನಾಟ್ಯಗಳ ಗಾನವೈಭವ ಏರ್ಪಡಿಸಲಾಗಿದೆ. ಚಿತ್ರ ನಟರಾದ ಸುನಾಮಿ ಕಿಟ್ಟಿ, ಅರ್ಜುನ್ ಜನ್ಯ ಸೇರಿ ನಟ ನಟಿಯರು ಭಾಗವಹಿ ಸಲಿದ್ದಾರೆ. 7 ಗಂಟೆಗೆ ಅನ್ನ ಸಂತರ್ಪಣೆ, 9 ಗಂಟೆಗೆ ಕುರುಕ್ಷೇತ್ರ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿದೆ, ಅಲ್ಲದೆ ಫೆ 14 ರಂದು ಬೆಳಗ್ಗೆ 5.30 ಗಂಟೆಗೆ ಅಗ್ನಿಕೊಂಡ ನಡೆಯಲಿದೆ ಎಂದು ನಡೆಯಲಿದೆ ಎಂದು ಸ್ವಾಮೀಜಿ ತಿಳಿಸಿದ್ದಾರೆ.

ತಾರಸಿಯಲ್ಲೇ ತೋಟ ಬೆಳಸಿ, ಆರೋಗ್ಯ ಉಳಿಸಿ

ವಿಶ್ವವಾಣಿ ಸುದ್ದಿಮನೆ ಪಾವಗಡ

ತೋಟಗಾರಿಕೆ ಇಲಾಖೆ ಪಾವಗಡ ಮತ್ತು ಅಕ್ಷಯ ರೂರಲ್ ಡೆವಲಪ್‌ಮೆಂಟ್ ಅಂಡ್ ಯೂತ್ ವೆಲ್ಫೇರ್ ಸೆಂಟರ್ ಗುಬ್ಬಿ ಇವರ ಸಂಯುಕ್ತಾಶ್ರಯದಲ್ಲಿ ಕೈತೋಟ ಹಾಗೂ ತಾರಸಿ ತೋಟಗಳ ಉತ್ತೇಜನಾಡಿಯಲ್ಲಿ ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮವನ್ನು ಪಟ್ಟಣದ ಬೈಟ್ ಫ್ಯೂಚರ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು.

ತೋಟಗಾರಿಕ ಹಿರಿಯ ಸಹಾಯಕ ನಿರ್ದೇಶಕ ಸುಧಾಕರ್‌ರವರು ಮಾತನಾಡಿ, ದಿನ ನಿತ್ಯದಲ್ಲಿ ತೋಟಗಾರಿಕ ಬೆಳೆಗಳಾದ ಹೂ, ಹಣ್ಣು ತರಕಾರಿಗಳು ನಮ್ಮ ಆರೋಗ್ಯಕ್ಕೆ ಅತ್ಯವಶ್ಯಕ. ಜಂಕ್ ಆಹಾರ ಹಾಗೂ ಕೆಲ ಸಿದ್ದಾಹಾರಗಳು ನಮ್ಮ ಆರೋಗ್ಯವನ್ನು ಹಾಳುಗೆಡುತ್ತವೆ. ರಾಸಾಯನಿಕ ಮುಕ್ತ ಆಹಾರ ಸೇವನೆ ಆರೋಗ್ಯ ಕಾಪಾಡಿಕೊಳ್ಳಲು ಮುಖ್ಯ ಎಂದರು.

ಅಕ್ಷಯ ಡೆವಲೆಪ್ಮೆಂಟ್ ಯೋಜನಾಧಿಕಾರಿ ರವಿ ಮಾತನಾಡಿ, ತಮಗೆ ಬೇಕಾದಂತ ಸಾವಯವಯುಕ್ತ ತೋಟಗಾರಿಕ ಇಲಾಖೆಯಿಂದ ತರಬೇತು ದಾರರಿಗೆ ಕೈತೋಟಕ್ಕೆ ಬೇಕಾದ ತರಕಾರಿ ಬೀಜಗಳು ಸೇರಿ ಇತರೆ ಸಲಕರಣೆಗಳನ್ನು ವಿತರಿಸಲಾಯಿತು.

ತೋಟಗಾರಿಕ ಇಲಾಖೆಯಿಂದ ತರಬೇತು ದಾರರಿಗೆ ಕೈತೋಟಕ್ಕೆ ಬೇಕಾದ ತರಕಾರಿ ಬೀಜಗಳು ಸೇರಿ ಇತರೆ ಸಲಕರಣೆಗಳನ್ನು ವಿತರಿಸಲಾಯಿತು.

ಸೊಪ್ಪು, ತರಕಾರಿ ಜತೆಗೆ ಪರಂಗಿ, ಅವರೆಯನ್ನು ಕಡಿಮೆ ಜಾಗದ ಹಿತ್ತಲಗಳಲ್ಲಿ ಬೆಳೆಯಬಹುದು. ಇದರಿಂದ ಆದಾಯಗಳಿಸುವುದರೊಂದಿಗೆ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಬೈಟ್ ಸಂಸ್ಥೆಯ ಸಿಇಒ ಶ್ರೀಧರ್‌ಗುಪ್ತ ಮಾತನಾಡಿ, ಆಧುನೀಕರಣ, ಜಾಗತೀಕರಣದ ನಡುವೆ ಸದಾ ಜಂಜಾಟದ ಆತಾತುರದ ಬದುಕಿನಲ್ಲಿ ರಾಸಾಯನಿಕಯುಕ್ತ ತರಕಾರಿ ಇತರೆ ವಸ್ತುಗಳ ಮೊರೆಹೋಗದೆ, ಮನೆಯಂಗಳದಲ್ಲಿ ಕೈತೋಟ ಹಾಗೂ ತಾರಸಿ ತೋಟ ಬೆಳೆಸಿಕೊಳ್ಳಬೇಕು. ಇದರಿಂದ ಲಭ್ಯವಾಗುವ ಪರಿಶುದ್ಧ ಗಾಳಿ ಮನಸ್ಸಿಗೆ ಮಂದ ನೀಡುವುದರ ಜತೆಗೆ ದೈನಂದಿನ ಆಹಾರಕ್ಕೆ ಅವಶ್ಯವಿರುವ ಸಾವಯವ ಬೆಳೆಗಳು ಉತ್ತಮ ಆರೋಗ್ಯಕ್ಕೆ ಪ್ರಾಮುಖ್ಯವಹಿಸುತ್ತವೆ. ಜನಸಾಮಾನ್ಯರು ಈ ಮಾದರಿಯ ಯೋಜನೆಗಳ ತರಬೇತಿಗಳಲ್ಲಿ ಭಾಗವಹಿಸಿ ಅಲ್ಲಿ ನೀಡುವ ಮಾಹಿತಿಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಬೈಟ್ ವುಮೆನ್ಸ್ ಸಂಸ್ಥೆ ಅಧ್ಯಕ್ಷೆ ಸುಮಾ ಶ್ರೀಧರ್‌ಗುಪ್ತ, ಧಾನ್ ಫೌಂಡೇಷನ್ ವೀರಭದ್ರಪ್ಪ, ತೋಟಗಾರಿಕ ಇಲಾಖೆ ಸುನಿಲ್, ಉಗ್ರಪ್ಪ, ರೈತ ಮಹಿಳೆಯರು ಇದ್ದರು.

ಹಣ ದುರುಪಯೋಗ: ಪಿಡಿಒ ಅಮಾನತು

ಚಿಕ್ಕನಾಯಕನಹಳ್ಳಿ : ಅನುದಾನ ದುರುಪಯೋಗ, ಸದಸ್ಯರೊಂದಿಗೆ ಅನು